(ಏ) ಸಿಂಧನೂರು ತಾಲ್ಲೂಕಿನಲ್ಲಿ ಒಂದು ವಾರದಿಂದ ಕಾಲರಾ ಹರಡುವ ಸಂಭವ.

+ ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು):- ಮಾನ್ಯ ಉಪಾಧ್ಯಕ್ಷರೆ, ಸಿಂಧನೂರು ತಾಲ್ಲೂಕಿನ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳಲ್ಲಿ ಕಳೆದ ಒಂದು ವಾರದಿಂದ ವಾಂತಿ ಭೇದಿ ಪ್ರಾರಂಭವಾಗಿ ಕಾಲರಾ ಹರಡುವ ಸಂಭವ ಕಂಡುಬರುತ್ತಿದೆ. ಇದರಿಂದಾಗಿ ಸುಮಾರು 500-600 ಜನರು ಆಸ್ಪತ್ರೆಗಳಿಗೆ ಸೇರಿದ್ದಾರೆ. ಇವತ್ತಿನ ಬೆಳಗಿನ ವರದಿಯ ಪ್ರಕಾರ 18 ಜನರು ಸಾವನ್ನಪ್ಪಿದ್ದಾರೆ. ಇದಕ್ಕೆ ಕಾರಣ ಏನೆಂದರೆ, ಅಲ್ಲಿ ಕುಡಿಯುವ ನೀರಿನ ಉತ್ತಮ ವ್ಯವಸ್ಥೆ ಇಲ್ಲದ್ದು. ತಮಗೆ ಗೊತ್ತಿರುವಂತೆ ನಮ್ಮ ಸಿಂಧನೂರು ತಾಲ್ಲೂಕಿನಲ್ಲಿ 60-70 ಪರ್ಸೆಂಟ್ ಭಾಗಗಳಲ್ಲಿ ಕುಡಿಯುವುದಕ್ಕೆ ಸಿಹಿ ನೀರು ಸಿಕ್ಕುವುದಿಲ್ಲ. ಬೋರ್ ಕೊರೆದರೂ ಸಿಕ್ಕುವುದಿಲ್ಲ. ಆದ್ದರಿಂದ ಆ ಭಾಗದ ಎಲ್ಲ ಜನರೂ ಕೂಡ ತುಂಗಭದ್ರಾ ಎಡ ದಂಡೆಯ ಕಾಲುವೆಯ ನೀರನ್ನೇ ಅವಲಂಬಿಸಿದ್ದಾರೆ. ಈ ತುಂಗಾಭದ್ರಾ ಕಾಲುವೆ ಏಪ್ರಿಲ್ 1ನೇ ತಾರೀಖು ಬಂದ್ ಆಗಿದೆ. ಅಂದರೆ 4 ತಿಂಗಳು ಕಳೆದುಹೋಗಿದೆ. ಅಲ್ಲಿಂದ ಇದುವರೆಗೆ ಎಲ್ಲೂ ಕೂಡ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಆಗದೇ ಇರುವ ಕಾರಣ, ಇಂಥ ಪರಿಸ್ಥಿತಿ ಅಲ್ಲಿ ಉದ್ಭವವಾಗಿದೆ. ಸರ್ಕಾರದವರು ಟ್ಯಾಂಕರ್ ಮೂಲಕ ನೀರನ್ನೊದಗಿಸುವ ಕೆಲಸ ಮಾಡಬೇಕಾಗಿತ್ತು. ಆದನ್ನು ಮಾಡಲಿಲ್ಲ. ಈಗ ನಾನು ಒಂದು ಟಾಸ್ಕ್‌ಫೋರ್ಸ್ ಕಮಿಟಿಯ ಸದಸ್ಯನಾಗಿದ್ದೇನೆ. ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ 2 ಸಾರಿ ಸಭೆಯನ್ನು ಕರೆದು ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗೆ ಇಷ್ಟು ಕೋಟಿ ರೂ. ಬೇಕೆಂದು ಬೇಡಿಕೆಯನ್ನು ಸಲ್ಲಿಸಿದ್ದರೂ ಕೂಡ ಜಿಲ್ಲಾಧಿಕಾರಿಗಳು ಹಣವನ್ನು ಬಿಡುಗಡೆ ಮಾಡಿರತಕ್ಕದ್ದು ಜೂನ್ ತಿಂಗಳಲ್ಲಿ, ಮತ್ತು ಜುಲೈ ತಿಂಗಳಲ್ಲಿ. ಕಾಲುವೆಯ ನೀರು ಬಂದ್ ಆಗಿರತಕ್ಕದ್ದು 1ನೇ ಏಪ್ರಿಲ್ ತಿಂಗಳಲ್ಲಿ. ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡಿರುವುದು ಜೂನ್, ಜುಲೈ ತಿಂಗಳಲ್ಲಿ. ಈ ರೀತಿ ಆದರೆ ಇವರು ನಮ್ಮ ಭಾಗದ ಜನರಿಗೆ ಯಾವರೀತಿಯಲ್ಲಿ ಒಳ್ಳೆಯ ಕುಡಿಯುವ ನೀರನ್ನು ಒದಗಿಸಿದ್ದಾರೆ ಎಂಬುದನ್ನು ತಾವೇ ಯೋಚನೆ ಮಾಡಬೇಕು.

ಇವತ್ತು ಈ ಒಂದು ಟಾಸ್ಕ್‌ಫೋರ್ಸ್ ಕಮಿಟಿ ರೆಸಲ್ಯೂಷನ್ ಮಾಡಿ ಕಳುಹಿಸಿದರೂ ಕೂಡ ಅಧಿಕಾರಿಗಳಿಗೆ ಹಣಕಾಸು ಬಿಡುಗಡೆ ಮಾಡಲಿಕ್ಕೆ 4 ತಿಂಗಳ ಅವಧಿ ಬೇಕಾದರೆ ಸರ್ಕಾರದಲ್ಲಿ ದುಡ್ಡಿನ ಕೊರತೆ ಇದೆಯೋ ಅಥವಾ ಅಧಿಕಾರಿಗಳ ಬೇಜವಾಬ್ದಾರಿಯೋ ಇದಕ್ಕೆ ಸರ್ಕಾರ ಸರಿಯಾಗಿ ಉತ್ತರಿಸಬೇಕು. ಅಲ್ಲದೆ ರೋಗಿಗಳಿಗೆ ಸರಿಯಾದ ಔಷಧಿ ವ್ಯವಸ್ಥೆ ಇಲ್ಲವೆಂದು ಹೇಳುವ ಪರಿಸ್ಥಿತಿ ಬಂದಿದೆ. ಇವತ್ತು ಔಷಧಿಗಳ ಮತ್ತು ಇಂಜೆಕ್ಷನ್ನಿನ ಕೊರತೆ ಇದೆ. ನಾನು ಸಿಂಧನೂರಿನಿಂದ ಫೋನ್ ಮೂಲಕ ಸಂಬಂಧಪಟ್ಟ ಸಚಿವರೊಡನೆ ಮಾತನಾಡಲಿಕ್ಕೆ ಪ್ರಯತ್ನ ಮಾಡಿದೆ. ಕಂದಾಯ ಸಚಿವರೊಡನೆ ಮಾತನಾಡಲಿಕ್ಕೆ ಪ್ರಯತ್ನ ಮಾಡಿದೆ, ಇಬ್ಬರು ಸಚಿವರು ಸಿಗಲಿಲ್ಲ. ಆದರೆ ಅಲ್ಲಿ ಇವತ್ತು ಔಷಧಿ ಕೊರತೆ ಇದೆ, ನೀರಿನ ಕೊರತೆ ಇದೆ. ಇದರಿಂದ 18-20 ಜನರು ತೀರಿಕೊಂಡಿದ್ದಾರೆ. ಇವತ್ತು ಸರ್ಕಾರದ ಬೇಜವಾಬ್ದಾರಿಯಿಂದ 18 ಜನ ತೀರಿಕೊಂಡಿದ್ದಾರೆ, ಅದಕ್ಕೆ ಸರಿಯಾದ ಪರಿಹಾರವನ್ನು

ಸರ್ಕಾರ ಒದಗಿಸಬೇಕೆಂಬುದು ನನ್ನ ಬೇಡಿಕೆ. ಅದರ ಜೊತೆಯಲ್ಲಿ ನೀರು ಮತ್ತು ಔಷಧಿಗಳನ್ನು ಸರಿಯಾಗಿ ಒದಗಿಸಿ ಮುಂದೆ ಇಂಥ ರೋಗ ಹರಡದಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಸಿಂಧನೂರಿನಲ್ಲಿ ತುಂಗಭದ್ರ ಕೆನಾಲ್ ನೀರು ಸರಬರಾಜಿನಿಂದ ಆಗಿರತಕ್ಕ ತೊಂದರೆಯಿಂದ 6-8-96 ರಿಂದ 7-8-96 ರವರೆಗೆ ಬಾವಿ ನೀರು ಕುಡಿದು 233 ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 5 ಸಾವುಗಳು ಆಗಿವೆ. ಜಿಲ್ಲಾ ಆರೋಗ್ಯಾಧಿಕಾರಿ ಸಿಂಧನೂರಿನಲ್ಲಿ ಮೊಕ್ಕಾಂ ಮಾಡಿದ್ದಾರೆ. ಅಲ್ಲಿಗೆ ಆಗತ್ಯವಾಗಿ ಬೇಕಾದ ಎಲ್ಲಾ ಔಷಧಿ ಮಾತ್ರೆಗಳನ್ನು ಸರಬರಾಜು ಮಾಡಿ ಸುಮಾರು 18 ಜನ ಪ್ಯಾರಾ ಮೆಡಿಕಲ್ ವರ್ಕರ್ಸ್ ಮತ್ತು 8 ಜನ ವೈದ್ಯರು ಸ್ಥಳದಲ್ಲೇ ಮೊಕ್ಕಾಂ ಮಾಡಿ ಮುನ್ನೆಚ್ಚರಿಕೆ ಕ್ರಮ ಮಾಡುತ್ತಿದ್ದಾರೆ. ಅಲರ್ಜಿ ಮಾತ್ರೆಗಳನ್ನು ಕೊಟ್ಟಿದ್ದೇವೆ, ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದೇವೆ, ಈಗಾಗಲೇ 4 ಪುರಸಭೆಗಳಿಗೆ ನೀರಿನ ಸರಬರಾಜು ಮಾಡಿದ್ದೇವೆ. ಈ ರೀತಿ ಗ್ಯಾಸ್ಟ್ರೊ ಎಂಟ್ರೈಟೀಸ್ ಏನು ಉಂಟಾಗಿದೆ ಅದು ಈಗ ಹತೋಟಿಯಲ್ಲಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಜನರಿಗೆ ತಿಳುವಳಿಕೆ ಕೊಡಲಾಗಿದೆ. ಆಗತ್ಯ ಇರುವ ಎಲ್ಲಾ ಕ್ರಮವನ್ನು ಇಲಾಖೆ ವತಿಯಿಂದ ಕೈಗೊಂಡಿದ್ದೇವೆ. ಮಾನ್ಯ ಸದಸ್ಯರು ಗಾಬರಿ ಪಡಬೇಕಾದ ಆಗತ್ಯ ಇಲ್ಲವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದರ ಜೊತೆಗೆ ಸುಮಾರು 60 ರೋಗಿಗಳು ಖಾಸಗೀ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಉಳಿದವರು ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ. ಕೆಲವು ಹೋಟೆಲ್‌ಗಳನ್ನು ಮತ್ತು ಕೊಯ್ದು ಮಾರತಕ್ಕ ಹಣ್ಣಿನ ಮಾರಾಟವನ್ನು ನಿಷೇಧಗೊಳಿಸುವುದಕ್ಕೆ ಸೂಚನೆ ಕೊಟ್ಟಿದ್ದೇವೆ. ಮುನ್ನೆಚ್ಚರಿಕೆ ಕಾರ್ಯಕ್ರಮಗಳು ಈಗಾಗಲೇ ಅಲ್ಲಿ ನಡೆದಿವೆ. ಜಿಲ್ಲಾ ಆರೋಗ್ಯಾಧಿಕಾರಿಗಳು ಖುದ್ದಾಗಿ ಭೇಟಿ ನೀಡಿದ್ದಾರೆ. ಇತರ ಪ್ರದೇಶಗಳಿಗೆ ಜಾಯಿಂಟ್ ಡೈರೆಕ್ಟರ್ ಮತ್ತು ಕಮ್ಯುನಿಕಬಲ್ ಜಾಯಿಂಟ್ ಡೈರೆಕ್ಟರ್‌ರವರನ್ನು ಬೇರೆ ಬೇರೆ ಭಾಗಕ್ಕೆ ಹೋಗಿ ವಿವರವಾದ ವರದಿಯನ್ನು ತರಬೇಕು ಮತ್ತು ಮುನ್ನೆಚ್ಚರಿಕೆ ಕ್ರಮವನ್ನು ಆ ಭಾಗದಲ್ಲಿ ತೆಗೆದುಕೊಳ್ಳಬೇಕೆಂದು ನಿನ್ನೆ ಕಳುಹಿಸಿಕೊಟ್ಟಿದ್ದೇವೆ. ಹೀಗಾಗಿ ನಮ್ಮ ಕಡೆಯಿಂದ ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ ಆಗತ್ಯವಾದ ಔಷಧಿಗಳನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇನ್ನೂ ಹೆಚ್ಚು ಔಷಧದ ಆಗತ್ಯ ಇದೆ ಎಂದರೆ ಸರ್ಕಾರದಲ್ಲಿ ತೊಂದರೆ ಏನೂ ಇಲ್ಲ, ಅದನ್ನು ಪೂರೈಸುತ್ತೇವೆ. ಮುನ್ನೆಚ್ಚರಿಕೆ ಕಾರ್ಯಕ್ರಮಗಳನ್ನು ಆದ್ಯತೆ ಕೊಟ್ಟು ತೆಗೆದುಕೊಂಡಿದ್ದೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಉಪಾಧ್ಯಕ್ಷರು:- ಇದು ಪ್ರಶ್ನೋತ್ತರ ಅಲ್ಲ, ಚರ್ಚೆ ಮಾಡುವ ಹಾಗೆ ಇಲ್ಲ. ಮಾನ್ಯ ಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ವಿರೂಪಾಕ್ಷಪ್ಪ:- 18 ಜನರು ತೀರಿಕೊಂಡಿದ್ದಾರೆ. ಆವರ ಲೆಕ್ಕದ ಪ್ರಕಾರ 5 ಜನ ಸರ್ಕಾರಿ ಆಸ್ಪತ್ರೆಯಲ್ಲಿ ತೀರಿಕೊಂಡಿರಬೇಕು ಮತ್ತು ಖಾಸಗಿ ಆಸ್ಪತ್ರೆಯಲ್ಲಿ 18 ಜನರು ತೀರಿಕೊಂಡಿದ್ದಾರೆ. ಇದರ ಬಗ್ಗೆ ಏನು ಹೇಳುತ್ತದೆ ಸರ್ಕಾರ? ಇದಕ್ಕೆ ಸರ್ಕಾರದ ಪರಿಹಾರವೇನು? ಸರ್ಕಾರದ ಬೇಜವಾಬ್ದಾರಿಯಿಂದ ತೀರಿಕೊಂಡಿರುವುದರಿಂದ ಮತ್ತು ಸರ್ಕಾರಕ್ಕೆ ಸರಿಯಾಗಿ ನೀರು ಒದಗಿಸಲಿಕ್ಕೆ ಆಗಲಿಲ್ಲವೆಂದರೆ ಸರ್ಕಾರ ಸಮರ್ಪಕವಾಗಿ ಉತ್ತರ ಕೊಡಬೇಕಲ್ಲ!

ಉಪಾಧ್ಯಕ್ಷರು:- ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಲ್ಲ. ತಾವು ಕೇಳಿದ್ದಕ್ಕೆ ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ, ಮತ್ತೆ ಬೇಕಾದರೆ ಬೇರೆ ಪ್ರಶ್ನೆ ಹಾಕಿ ಉತ್ತರ ಕೊಡುತ್ತಾರೆ. ಈಗ ಮತ್ತೆ ಪ್ರಶ್ನೆ ಕೇಳುವುದಕ್ಕೆ ಅವಕಾಶವಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ವಿರೂಪಾಕ್ಷಪ್ಪ:- ಪರಿಹಾರ ಏನು ಕೊಡುತ್ತಾರೆಂದು ಕೇಳುತ್ತೇನೆ. ಇದು ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಗಿದೆ. ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಡಾ. ಹೆಚ್.ಸಿ. ಮಹಾದೇವಪ್ಪ:- ನಮ್ಮ ದೇಶದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನೋಡಿದಾಗ, ಸಾಂಕ್ರಾಮಿಕ ರೋಗಗಳು ಕುಡಿಯುವ ನೀರಿನಿಂದ ಉಂಟಾಗಿ ಸಾವು ನೋವುಗಳು ಆದಾಗ ಎಲ್ಲಿ ಪರಿಹಾರ ಕೊಡಲಿಕ್ಕೆ ಸಾಧ್ಯವಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಶುದ್ಧವಾದ ನೀರು ಕೊಡಬೇಕೆಂಬುದು ಯಾವುದೇ ನಾಗರೀಕ ಸರ್ಕಾರದ ಕರ್ತವ್ಯ ಮತ್ತು ಜವಾಬ್ದಾರಿ ಆಗಿದ್ದರೂ ಕೂಡ ಆಲ್ಲಲ್ಲಿ ಮಳೆ ಬಿದ್ದಾಗ, ಬೇಸಿಗೆ ಕಾಲದಲ್ಲಿ ಪ್ರಜ್ಞೆ ಇಲ್ಲದೆ ಎಲ್ಲೋ ಹರಿದು ಹೋಗತಕ್ಕ ನೀರನ್ನು ಜನರು ಕುಡಿಯುವುದರಿಂದ ಇಂಥ ಕಾಯಿಲೆಗಳು ಉದ್ಭವವಾಗುತ್ತವೆ. ಇದಕ್ಕೆ ಆವರಿಗೆ ತಿಳುವಳಿಕೆ ಮೂಡಿಸುವ ಕೆಲಸವನ್ನು ಗ್ರಾಮಸಭೆ, ಪುರಸಭೆ ಮತ್ತು ಆರೋಗ್ಯ ಇಲಾಖೆಯ ವತಿಯಿಂದ ಮಾಡಲಾಗುತ್ತಿದೆ. ಆರ್ಥಿಕ ಸಾಮಾಜಿಕ ಬದುಕಿನ ಹಿನ್ನೆಲೆಯಲ್ಲಿ ಸಾವು ನೋವುಗಳು ಸಂಭವಿಸುತ್ತವೆ. ಕರ್ನಾಟಕ ಸರ್ಕಾರ 1983 ರಿಂದ ಇಲ್ಲಿಯವರೆಗೆ ಲಕ್ಷಾಂತರ ಕೊಳವೆ ಬಾವಿಗಳನ್ನು ಕೊರೆಸಿದೆ. ಒಂದು ವೇಳೆ ಕೊಳವೆ ಬಾವಿ ತೆಗೆಯದಿದ್ದರೆ ಸಾವಿರಾರು ಜನರು ಕಲುಷಿತ ನೀರಿನಿಂದ ಉದ್ಭವವಾಗತಕ್ಕ ಕಾಯಿಲೆಗಳಿಂದ ಸಾವನ್ನು ಅಪ್ಪುತ್ತಿದ್ದರು. ಆದುದರಿಂದ ಸಾವಿಗೆ ಪರಿಹಾರ ಕೊಡಲಿಕ್ಕೆ ಸಾಧ್ಯವಿಲ್ಲ. ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಎಲ್ಲಾ ಕ್ರಮ ತೆಗೆದುಕೊಂಡಿದ್ದೇವೆಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಕೆ. ವಿರೂಪಾಕ್ಷಪ್ಪ:- ಅಫ್ಜಲ್‌ಪುರದಲ್ಲಿ ಈಗಾಗಲೇ ಪರಿಹಾರ ಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿ ಏತಕ್ಕೆ ಕೊಡಬಾರದು? ಭೇದಭಾವ ಏತಕ್ಕೆ ಮಾಡಬೇಕು? ಒಂದು ಪ್ರದೇಶದಲ್ಲಿ ಕೊಟ್ಟು ಮತ್ತೊಂದು ಪ್ರದೇಶದಲ್ಲಿ ಕೊಡದಿರುವುದು ಸರಿಯೇ?

ಉಪಾಧ್ಯಕ್ಷರು:- ಶೂನ್ಯ ವೇಳೆಯಲ್ಲಿ ಈ ರೀತಿ ಆದರೆ ಯಾವ ರೀತಿ ಮಾಡಬೇಕು ಹೇಳಿ? ಅವರ ಜೊತೆ ಹೋಗಿ ಕುಳಿತು ಚರ್ಚೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಫ್ಜಲ್‌ಪುರದಲ್ಲಿ ಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿಯೂ ಕೊಡುತ್ತೀರಾ ಏನು ಎಂದು ಕೇಳುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಜನರು ಸತ್ತಾಗ ಪರಿಹಾರ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು:- ತಾವು ಯಾವ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕು ಅದು ಮಾಡಿ, ನಂತರ ವಿಚಾರ ಮಾಡೋಣ.

(ಐ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆಗಳ ಹಾವಳಿ.

+ ಶ್ರೀ ಸಿ.ಆರ್. ಸಗೀರ್ ಅಹಮದ್:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆಗಳ ಹಾವಳಿಯಿಂದ ಇಲ್ಲಿಯವರೆಗೆ 15 ಜನ ಮೃತಪಟ್ಟಿದ್ದಾರೆ.

ಉಪಾಧ್ಯಕ್ಷರು:- ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಬೇಕು. ಬೇಡಿಕೆಗಳ ಮೇಲೆ ಸಚಿವರು ಉತ್ತರಿಸಬೇಕಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಈ ಪ್ರಶ್ನೆಗಾಗಿ ನಾನು ಸದನ ಪ್ರಾರಂಭವಾದಾಗಿನಿಂದ ಇವತ್ತಿನವರೆಗೆ ಕಾದಿದ್ದೇನೆ. ದಯವಿಟ್ಟು ಮಧ್ಯದಲ್ಲಿ ನಿಲ್ಲಿಸಿ ಎಂದರೆ ಆಗುವುದಿಲ್ಲ. ಚಿರತೆ ಮತ್ತು ಆನೆ ಹಾವಳಿಯಿಂದ ಅದೂ ಬಯಲುಸೀಮೆ ಪ್ರದೇಶದಲ್ಲಿ ಅಮಾಯಕರು ಹೆಚ್ಚು ಕಡಿಮೆ 15 ಜನರು ಮೃತಪಟ್ಟಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಬಹಳ ಗಂಭೀರವಾದ ಪ್ರಶ್ನೆ. ನಾನು ಮಲೆನಾಡಿನಲ್ಲಿ ವಾಸವಾಗಿದ್ದು, ಈ ಚಿರತೆ ಹುಲಿ ಆನೆ ಎಲ್ಲ ಬಯಲು ಸೀಮೆ ಕಡೆ ಬರುತ್ತಿವೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದರೂ ಸಹ ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದರೆ ಚಿರತೆ ಸಾಯಿಸುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಗುಂಡಿಕ್ಕಿ ಹೆಚ್ಚು ಕಡಿಮೆ 8 ಚಿರತೆಗಳನ್ನು ಸಾಯಿಸಿದ್ದಾರೆ. ಇದು ಪರಿಸರದ ವಿರುದ್ಧವಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮ. ತಮ್ಮ ಗಮನಕ್ಕೆ ತರುವುದಾದರೆ, ಆನೆ ತುಳಿತಕ್ಕೆ ಈಡಾಗಿ ಜನರು ಸತ್ತಿದ್ದಾರೆ. ಚಿರತೆಗೆ ಈಡಾಗಿ 12 ಜನರು ಮೃತಪಟ್ಟಿದ್ದಾರೆ. ಇದಕ್ಕೆ ನೀಡಿರುವ ಪರಿಹಾರ ಕೇವಲ ರೂ. 10,000-00 ಇದು ಯಾವ ನ್ಯಾಯ ಎಂದು ತಾವು ಹೇಳಬೇಕು. ಒಂದು ಕೋಮು ಗಲಭೆ ಆದಂಥ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯ ಸಾವು ಆದಾಗ ಸರ್ಕಾರ ಒಂದು ಲಕ್ಷ ರೂಪಾಯಿ ಕೊಡುವ ಘೋಷಣೆ ಮಾಡುತ್ತಾರೆ. ಇವತ್ತು ಪ್ರಕೃತಿ ವಿಕೋಪದ ಕಾರಣಕ್ಕೆ ಸತ್ತಂಥ ಜನರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡುತ್ತದೆ. ಒಂದು ಅಪಘಾತದಲ್ಲಿ ಸತ್ತವರಿಗೆ ಸರ್ಕಾರದ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಚಾಲಕರಾಗಲಿ, ಕಂಡಕ್ಟರ್ ಆಗಲಿ ಅವರಿಗೆ 50 ಸಾವಿರ ರೂಪಾಯಿ ಕೊಡುವ ಘೋಷಣೆ ಮಾಡಿದ್ದಾರೆ. ಅಮಾಯಕರ ಮೇಲೆ ಚಿರತೆ ಹಾವಳಿ ಮಾಡಿ 12 ಜನರನ್ನು ಸಾಯಿಸಿರುವಾಗ ಇವರು ನೀಡಿರುವ ಪರಿಹಾರ ಎಷ್ಟು ಎಂದು ಮುಖ್ಯವಾಗಿ ಸರ್ಕಾರ ಆಲೋಚನೆ ಮಾಡಬೇಕಾಗಿತ್ತು. ಇದು ಪ್ರಾಯಕ್ಕೆ ಬಂದಂಥ, ಮನೆಯ ಕುಟುಂಬದ ಜವಾಬ್ದಾರಿ ಹೊತ್ತಂಥ ಯುವಕ ಯುವತಿಯರು ಈ ಘಟನೆಗಳಲ್ಲಿ ಸತ್ತಿದ್ದಾರೆ. ಅದರ ಜೊತೆಗೆ